ಮನ್ವಂತರಕ್ಕೆ ನೆರವಾದವು.

‘ಭಾರತ ಮಹಿಳಾ ಕ್ರಿಕೆಟ್ ಸಂಘ’ 2007ರಲ್ಲಿ ಬಿಸಿಸಿಐ ಸುಪರ್ದಿಗೆ ಬಂದ ಮೇಲೆ ಹಣದ ಕೊರತೆ ಕಾಡಲಿಲ್ಲವಾದರೂ, ವನಿತೆಯರ ಕ್ರಿಕೆಟ್‌ನಿಂದಾಗಿ ಮಂಡಳಿಗೆ ಮರಳಿ ಬರುವ ಆದಾಯ ಬಹಳಷ್ಟು ಕಡಿಮೆಯಿತ್ತು. ಪ್ರಾಯೋಜಕರು, ಜಾಹೀರಾತು ಕೂಡ ಹೆಚ್ಚು ಸಿಗುತ್ತಿರಲಿಲ್ಲ. ಹೀಗಾಗಿ ಬಿಸಿಸಿಐ ಮಹಿಳಾ ಕ್ರಿಕೆಟ್ ಅನ್ನು ಎತ್ತರಕ್ಕೆ ಏರಿಸುವ ಗಂಭೀರ ಪ್ರಯತ್ನಗಳನ್ನು ಆರಂಭದಲ್ಲಿ ಮಾಡಲಿಲ್ಲ. ಮುಖ್ಯವಾಗಿ ಪ್ರತಿಭೆ, ಕೌಶಲ ತೋರಿಸಲು ಪಂದ್ಯಗಳನ್ನೇ ನಡೆಸುತ್ತಿರಲಿಲ್ಲ. ಬಿಸಿಸಿಐ ಸುಪರ್ದಿಗೆ ಬಂದು ಮೊದಲು ಆರು ವರ್ಷಗಳವರೆಗೆ ಒಂದೂ ಟೆಸ್ಟ್ ಪಂದ್ಯ ಆಡಿಸಲಿಲ್ಲ. ಪುರುಷರ ತಂಡಗಳಿಗೆ ಹಲವು ರಾಜ್ಯಗಳಲ್ಲಿ ನಡೆಯುತ್ತಿದ್ದ ವಿವಿಧ ಡಿವಿಷನ್‌ಗಳ ಹಾಗೂ ಸ್ಮಾರಕಗಳ ಟ್ರೋಫಿಯ ಮಾದರಿಯ ಪಂದ್ಯಗಳು ಮಹಿಳೆಯರಿಗೆ ಇರಲಿಲ್ಲ. ಪುರುಷರ ಕ್ರಿಕೆಟ್‌ಗೆ ಹೋಲಿಸಿದರೆ ಭಾರತ ಮಹಿಳಾ ತಂಡ ಟೆಸ್ಟ್, ಏಕದಿನ ಮತ್ತು ಟಿ–20 ಮೂರೂ ಮಾದರಿಗಳಲ್ಲಿ ಆಡಿದ್ದು ಇಂದಿಗೂ ಕಡಿಮೆ ಪಂದ್ಯಗಳೇ. ಭಾರತ ಮಹಿಳಾ ತಂಡ ಇದುವರೆಗೂ ಒಟ್ಟು ಟೆಸ್ಟ್ ಆಡಿದ್ದು 38 ಮಾತ್ರ. ಆದ್ದರಿಂದ ‘ನಮಗೆ ಹಣ ಬೇಡ, ಪಂದ್ಯಗಳು ಬೇಕು’ ಎನ್ನುವ ಗಟ್ಟಿ ಧ್ವನಿ ಆಟಗಾರ್ತಿಯರಿಂದ ಮೊಳಗಿತು.

ಮೊದಲು ಸಂಭಾವನೆಯೂ ಕಡಿಮೆಯಿದ್ದ ಕಾರಣ ದಿನಗಟ್ಟಲೆ ಸಾಮಾನ್ಯ ದರ್ಜೆಗಳಲ್ಲಿ ರೈಲುಗಳಲ್ಲಿ ಪ್ರಯಾಣ ಮಾಡಿ, ಕಳಪೆ ಗುಣಮಟ್ಟದ ಹೋಟೆಲ್‌ಗಳಲ್ಲಿ ವಾಸ್ತವ್ಯ ಮಾಡಿ, ವೃತ್ತಿಪರ ಆಧುನಿಕ ಸೌಲಭ್ಯಗಳ ತರಬೇತಿಯಿಲ್ಲದೇ ಕಣ್ಣಿಳಿಯಬೇಕಾದ ಪರಿಸ್ಥಿತಿಯಿತ್ತು. ಮೊದಲಿಗೆ ಹೋಲಿಸಿದರೆ ಇತ್ತೀಚಿನ ವರ್ಷಗಳಲ್ಲಿ ಭಾರತಕ್ಕೆ ಹೆಚ್ಚು ಪಂದ್ಯಗಳನ್ನು ಆಡಲು ಅವಕಾಶ ಸಿಗುತ್ತಿದೆ. ಪುರುಷರ ಕ್ರಿಕೆಟ್‌ಗೆ ಸಿಗುತ್ತಿರುವ ಪ್ರಾಧಾನ್ಯತೆ ಮಹಿಳಾ ತಂಡಕ್ಕೂ ಸಿಗಬೇಕು, ಲಿಂಗ ತಾರತಮ್ಯ ಮಾಡಬಾರದು ಎನ್ನುವ ಆಗ್ರಹದ ಹೋರಾಟದ ಫಸಲು ಈಗ ಕಾಣಿಸತೊಡಗಿದೆ.

ಆರ್.ಎಂ. ಲೋಧಾ ನೇತೃತ್ವದ ಸಮಿತಿಯ ಶಿಫಾರಸುಗಳ ಆಧಾರದಲ್ಲಿ ರಚನೆಯಾದ ನಿಯಮಾವಳಿಯಲ್ಲಿ ಕ್ರಿಕೆಟ್‌ನಲ್ಲಿ ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಡಲಾಗುತ್ತಿದೆ. ಇದೇ ಉದ್ದೇಶಕ್ಕೆ ಆರಂಭವಾದ ಅಪೆಕ್ಸ್ ಕೌನ್ಸಿಲ್‌ನಲ್ಲಿ ಮಹಿಳಾ ಪ್ರತಿನಿಧಿ ಇದ್ದಾರೆ. ಕೌನ್ಸಿಲ್ ರಚನೆಯಾದಾಗ ಮೊದಲು ಕರ್ನಾಟಕದ ಶಾಂತಾ ರಂಗಸ್ವಾಮಿ, ಈಗ ಶುಭಾಂಗಿ ಕುಲಕರ್ಣಿ ಇದ್ದಾರೆ. ಇದರಿಂದಾಗಿ ಇತ್ತೀಚೆಗಷ್ಟೇ ಮಹಿಳಾ ಕ್ರಿಕೆಟಿಗರಿಗೂ ಪುರುಷರ ತಂಡದ ಆಟಗಾರರ ಮಾದರಿಯಲ್ಲಿಯೇ ಸಮಾನ ವೇತನ ಸೌಲಭ್ಯಗಳನ್ನು ಬಿಸಿಸಿಐ ಘೋಷಿಸಿದೆ.

ನ್ಯೂಜಿಲೆಂಡ್‌ನಲ್ಲಿ ಈಗಾಗಲೇ ಜಾರಿಯಲ್ಲಿರುಂತೆ ಭಾರತದಲ್ಲಿಯೂ ಅಂತರರಾಷ್ಟ್ರೀಯ ಏಕದಿನ ಪಂದ್ಯಗಳಿಗೆ ಮಹಿಳಾ ಕ್ರಿಕೆಟಿಗರ ಸಂಭಾವನೆಯನ್ನು ₹1 ಲಕ್ಷದಿಂದ ₹6 ಲಕ್ಷ (ಏಕದಿನ), ₹ 1 ಲಕ್ಷದಿಂದ ₹ 3 ಲಕ್ಷ (ಟಿ–20) ಮತ್ತು ₹4 ಲಕ್ಷದಿಂದ ₹15 ಲಕ್ಷ (ಟೆಸ್ಟ್) ಏರಿಕೆಯಾಗಿದೆ. ಹೀಗಾಗಿ ಮಹಿಳಾ ಕ್ರಿಕೆಟ್‌ನಲ್ಲಿ ಸ್ಪರ್ಧೆಯೂ ಹೆಚ್ಚಾಗಿದ್ದು, ಆಡಲು ಅನೇಕರು ಮುಂದೆ ಬರುತ್ತಿದ್ದಾರೆ.

ಆಡಳಿತ ಮಂಡಳಿಯಲ್ಲಿರುವ ಸದಸ್ಯರ ಮತ್ತು ಹಿರಿಯ ಆಟಗಾರರ ‘ಸಮಾನತೆ’ಯ ಗಟ್ಟಿ ಧ್ವನಿ ಜೊತೆಗೆ ಭಾರತ ತಂಡ ಅಂತರರಾಷ್ಟ್ರೀಯ ಮಟ್ಟದ ಟೂರ್ನಿಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಮಾಡುತ್ತಿರುವ ಸಾಧನೆ ಆಟಗಾರ್ತಿಯರಿಗೆ ತಾರಾ ವರ್ಚಸ್ಸು ತಂದುಕೊಟ್ಟಿದೆ. ಮುಖ್ಯ ಕೋಚ್, ಬ್ಯಾಟಿಂಗ್, ಫೀಲ್ಡಿಂಗ್, ನೆಟ್ಸ್ ಟ್ರೈನರ್, ಫಿಸಿಯೊಥೆರಪಿಸ್ಟ್, ಫಿಟ್‌ನೆಸ್ ಟ್ರೈನರ್ ಹಾಗೂ ಅನಲಿಸ್ಟ್ ಹೀಗೆ ಪ್ರತಿ ವಿಭಾಗಕ್ಕೂ ಒತ್ತು ಕೊಟ್ಟು ವೃತ್ತಿಪರ ತರಬೇತುದಾರರನ್ನು ನೇಮಕ ಮಾಡಲಾಗಿದೆ. ಇದರ ಫಲ ಟೂರ್ನಿಗಳಲ್ಲಿ ಪ್ರತಿಫಲಗೊಳ್ಳುತ್ತಿದೆ. ಪುರುಷರಿಗೆ ಕಮ್ಮಿಯಿಲ್ಲದ ರೀತಿಯಲ್ಲಿ ಕೌಶಲಗಳನ್ನು ರೂಢಿಸಿಕೊಳ್ಳುತ್ತಿದ್ದಾರೆ. ಕ್ರಿಕೆಟ್ ಆಟಗಾರ್ತಿಯರಿಗೂ ಜಾಹೀರಾತುಗಳಲ್ಲಿ ಮಿಂಚುವ ಅವಕಾಶಗಳು ಸಿಗುತ್ತಿವೆ. ಇದರಿಂದಾಗಿ ಮಹಿಳಾ ಕ್ರಿಕೆಟಿಗರಿಗೆ ಅಭಿಮಾನಿಗಳ ಸಂಖ್ಯೆ ಹೆಚ್ಚುತ್ತಿದೆ.

ಭಾರತ ಮಹಿಳಾ ತಂಡ 2022ರಲ್ಲಿ ಇಂಗ್ಲೆಂಡ್‌ನಲ್ಲಿ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ಜಯಿಸಿದರೆ, ಬಾಂಗ್ಲಾದೇಶದಲ್ಲಿ ನಡೆದ ಏಷ್ಯಾ ಕಪ್‌ನಲ್ಲಿ ಚಾಂಪಿಯನ್ ಆಗಿದೆ. ಏಷ್ಯಾದ ರಾಷ್ಟ್ರಗಳಲ್ಲಿ ಪಾಕಿಸ್ತಾನ, ಶ್ರೀಲಂಕಾ, ಥಾಯ್ಲೆಂಡ್, ಬಾಂಗ್ಲಾದೇಶ, ಯುನೈಟೆಡ್ ಅರಬ್ ಎಮಿರೇಟ್ಸ್, ಮಲೇಷ್ಯಾ ತಂಡಗಳಿಗೆ ಸೆಡ್ಡು ಹೊಡೆದಿದೆ. ಇದೇ ರೀತಿಯ ಗಟ್ಟಿ ಪ್ರದರ್ಶನ ಅಂತರರಾಷ್ಟ್ರೀಯ ಮಟ್ಟದಲ್ಲಿ ತೋರಬೇಕಾಗಿದೆ. ಐಸಿಸಿ ರ್‍ಯಾಂಕಿಂಗ್‌ನಲ್ಲಿ ಮೊದಲ ಎರಡು ಸ್ಥಾನಗಳಲ್ಲಿರುವ ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಸವಾಲು ಮೆಟ್ಟಿ ನಿಲ್ಲಬೇಕಾಗಿದೆ.

ಮಹಿಳಾ ಕ್ರಿಕೆಟ್ ವೇಗವಾಗಿ ಬೆಳೆಯಲು ಬಿಸಿಸಿಐ ಕೊಡುಗೆ ಅನನ್ಯ. ಇತ್ತೀಚಿನ ವರ್ಷಗಳಲ್ಲಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ತರಬೇತಿ ಹಾಗೂ ಸೌಲಭ್ಯಗಳನ್ನು ಕಲ್ಪಿಸುತ್ತಿದೆ. ಹೆಚ್ಚು ಟೂರ್ನಿಗಳನ್ನು ಆಯೋಜಿಸುತ್ತಿದೆ. ಅಕಾಡೆಮಿಗಳನ್ನು ಸ್ಥಾಪಿಸಿದೆ. ಇಷ್ಟೆಲ್ಲಾ ಬೆಳವಣಿಗೆಯ ಹಿಂದೆ ಶಾಂತಾ ರಂಗಸ್ವಾಮಿ, ಮಮತಾ ಮಬೆನ್, ಡಯಾನಾ ಎಡುಲ್ಜಿ, ಸುಧಾ ಶಾ, ಸಂಧ್ಯಾ ಅಗರವಾಲ್, ಶುಭಾಂಗಿ ಕುಲಕರ್ಣಿ ಹೀಗೆ ಅನೇಕ ಆಟಗಾರ್ತಿಯರ ಪರಿಶ್ರಮವಿದೆ. ಸೀಮಿತ ಸೌಲಭ್ಯಗಳ ನಡುವೆಯೂ ಮಹಿಳಾ ಕ್ರಿಕೆಟ್ ಬೆಳವಣಿಗೆಯ ‘ರಾಯಭಾರಿ’ಗಳಾದ ಇವರ ಶ್ರಮಕ್ಕೆ ಈಗಿನ ಆಟಗಾರ್ತಿಯರು ಹಣ, ಹೆಸರು, ಕೀರ್ತಿ ಎಲ್ಲವನ್ನೂ ಪಡೆಯುತ್ತಿದ್ದಾರೆ.

## ಮಹಿಳಾ ಲೀಗ್‌ನ ‘ಹೊಸ ಭಾಷ್ಯ’

ಬಿಸಿಸಿಐ ಆಯೋಜಿಸಿರುವ ಚೊಚ್ಚಲ ಆವೃತ್ತಿಯ ‘ಮಹಿಳಾ ಇಂಡಿಯನ್ ಪ್ರೀಮಿಯರ್ ಲೀಗ್’ (ಡಬ್ಲ್ಯುಪಿಎಲ್) ಟಿ–20 ಟೂರ್ನಿ ಜಗತ್ತಿನಾದ್ಯಂತ ವನಿತೆಯರ ಕ್ರಿಕೆಟ್ ಬೆಳೆಯಲು ವೇದಿಕೆಯಾಗಲಿದೆ. ಯಾಕೆಂದರೆ ಪ್ರತಿ ತಂಡವು ಆಡುವ ಹನ್ನೊಂದರ ಬಳಗದಲ್ಲಿ ಐದು ವಿದೇಶಿ ಆಟಗಾರ್ತಿಯರನ್ನು ಖರೀದಿಸಬಹುದು. ಬಿಸಿಸಿಐ ಹೇಳಿರುವಂತೆ ಎಂಟು ವರ್ಷಗಳಲ್ಲಿ, ವಿವಿಧ ವಿಭಾಗಗಳ ಕ್ರಿಕೆಟ್ ಟೂರ್ನಿಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯಲ್ಲಿ ಪ್ರಮಾಣ ಶೇ. 111ರಷ್ಟು ಹೆಚ್ಚಳವಾಗಿದೆ. ಇದು ಕೂಡ ಭವಿಷ್ಯದಲ್ಲಿ ಇನ್ನಷ್ಟು ಸಾಧನೆಗೆ ಕಾರಣವಾಗಲಿದೆ.

ಚೊಚ್ಚಲ ಟೂರ್ನಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು, ಯು.ಪಿ. ವಾರಿಯರ್ಸ್, ಮುಂಬೈ ಇಂಡಿಯನ್ಸ್, ಗುಜರಾತ್ ಜೈಂಟ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ಪೈಪೋಟಿ ನಡೆಸಲಿದ್ದು, ಮೊದಲ ಬಿಡ್ಡಿಂಗ್‌ನಲ್ಲಿಯೇ ಆಟಗಾರ್ತಿಯರು ಕೋಟ್ಯಂತರ ರೂಪಾಯಿ ‘ಬೆಲೆ’ ಪಡೆದಿದ್ದಾರೆ. ಮುಂದಿನ ಐದು ವರ್ಷಗಳ ಪ್ರಸಾರದ ಹಕ್ಕನ್ನು ವಯಾಕಾಮ್ 18 ಸಂಸ್ಥೆ ₹ 951 ಕೋಟಿಗೆ ತನ್ನದಾಗಿಸಿಕೊಂಡಿದೆ. ಪ್ರತಿ ಪಂದ್ಯದ ಪ್ರಸಾರ ಹಕ್ಕು ₹ 7.09 ಕೋಟಿಗೆ ಮಾರಾಟವಾಗಿದ್ದು, ಮಹಿಳಾ ಕ್ರಿಕೆಟ್ ಪಂದ್ಯಗಳಿಗೆ ಇಷ್ಟೊಂದು ಮೌಲ್ಯ ಲಭಿಸಿದ್ದು ಇದೇ ಮೊದಲು. ಮಾರ್ಚ್ 4ರಂದು ಆರಂಭವಾಗಿರುವ ಮಹಿಳಾ ಪ್ರೀಮಿಯರ್ ಲೀಗ್ 26ರವರೆಗೆ ನಡೆಯಲಿದೆ.

ಭಾರತದ ಬ್ಯಾಟರ್ ಸ್ಮೃತಿ ಮಂದಾನ ಅವರನ್ನು ಆರ್‌ಸಿಬಿ ₹ 3.40 ಕೋಟಿ, ಆಲ್‌ರೌಂಡರ್ ದೀಪ್ತಿ ಶರ್ಮಾ ₹2.60 ಕೋಟಿಗೆ ವಾರಿಯರ್ಸ್, ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರನ್ನು ₹ 1.80 ಕೋಟಿಗೆ ಮುಂಬೈ ಇಂಡಿಯನ್ಸ್ ಖರೀದಿಸಿದೆ. ಭಾರತದ 10 ಜನ ಆಟಗಾರ್ತಿಯರು ಕೋಟಿಗಿಂತಲೂ ಹೆಚ್ಚು ಬೆಲೆ ಪಡೆದಿದ್ದಾರೆ. ■




ದೀಪ್ತಿ ಶರ್ಮಾ